ಅಕ್ಟೋಬರ್ 24 , 2016

**"L " ಒಳಾಕ್ಷರ ಇರುವ ,ಸಂಖ್ಯಾಂಕಣಗಳಲ್ಲಿ ಸಂಖ್ಯೆಗಳ ಗಾತ್ರ ಆರೋಹಣ ಮಾದರಿಯಲ್ಲಿರುವ , ಉಬ್ಬು ಮುದ್ರಣ ಇಲ್ಲದಿರುವ ₹ 20 ರ ಬ್ಯಾಂಕು ನೋಟುಗಳ ಬಿಡುಗಡೆ.**

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ರಘುರಾಮ್ ಜಿ. ರಾಜನ್ ಅವರ ಸಹಿಯುಳ್ಳ, ಬ್ಯಾಂಕು ನೋಟಿನ ಹಿಂದೆ ಮುದ್ರಣ ವರ್ಷ 2016 ಮುದ್ರಿಸಿರುವ, ನೋಟಿನ ಎರಡೂ ಸಂಖ್ಯಾಕಣಗಳಲ್ಲಿ "L " ಒಳಾಕ್ಷರ ಇರುವ , ಮಹಾತ್ಮಾ ಗಾಂಧಿ ಶ್ರೇಣಿ -2005 ರ, ₹20 ರ ಬ್ಯಾಂಕು ನೋಟುಗಳನ್ನು ಶ್ರೀಘ್ರದಲ್ಲಿಯೇ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ.

ಈಗ ನೀಡಲಿರುವ ನೋಟುಗಳ ವಿನ್ಯಾಸವು ಈ ಹಿಂದೆ ನೀಡಲಾದ ಮಹಾತ್ಮಾ ಗಾಂಧಿ ಶ್ರೇಣಿ -2005 ರ ಎರಡು ಬದಿಯ ಸಂಖ್ಯಾಂಕಣಗಳಲ್ಲಿ ಸಂಖ್ಯೆಗಳ ಗಾತ್ರ ಎಡದಿಂದ ಬಲಕ್ಕೆ ಆರೋಹಣ ಮಾದರಿಯಲ್ಲಿರುವ , ಉಬ್ಬು ಮುದ್ರಣ ಇಲ್ಲದಿರುವ , ಗುಪ್ತ ಚಿತ್ರ ಇಲ್ಲದಿರುವ , ಗುರುತು ಚಿನ್ಹೆ ಇಲ್ಲದಿರುವ ₹ 20 ಬ್ಯಾಂಕು ನೋಟುಗಳಂತಯೇ ಇರುತ್ತವೆ. ಉಬ್ಬು ಮುದ್ರಣವನ್ನು ತೆಗೆದಿರುವ ಕಾರಣ ನೋಟಿನ ಮುಂಭಾಗದ ವರ್ಣವು ತಿಳಿದಾಗಿರುತ್ತದೆ . (ಉಲ್ಲೇಖ : ಪತ್ರಿಕಾ ಪ್ರಕಟಣೆ ಸಂಖ್ಯೆ 2016 - 2017 /678 ದಿನಾಂಕ ಸೆಪ್ಟೆಂಬರ್ 15, 2016 )

ಈ ಹಿಂದೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೀಡಲಾದ ₹ 20 ರ ಮೌಲ್ಯವರ್ಗದ ಎಲ್ಲಾ ನೋಟುಗಳು ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

**ಪತ್ರಿಕಾ ಪ್ರಕಟಣೆ : 2016- 2017 / 1004**

**ಅಜಿತ್ ಪ್ರಸಾದ್**
**ಸಹಾಯಕ ಸಲಹೆಗಾರರು**